| | | | |
|---|---|---|---|
| 8. | Mangalore | — | — |
| 9. | Ullal | 52 | 114 |
| 10. | Surathkal | 25 | 34 |
| 11. | Bantwal | 81 | 61 |
| 12. | Vittal | 93 | 32 |
| 13. | Puttur | 147 | 141 |
| 14. | Belthangady | 180 | 75 |
| 15. | Sullia | 371 | 292 |
| | Total | 1185 | 1100 |

ಕನಕಪುರ ತಾಲ್ಲೂಕಿನಿಂದ ಪರದೇಶಕ್ಕೆ ಉತ್ತಮ ದರ್ಜೆಯ ಗ್ರಾನೈಟ್ ಕಲ್ಲು ರಫ್ತು ಆಗುತ್ತಿರುವ ಬಗ್ಗೆ

**೫೨೩. ಶ್ರೀ ಕೆ. ಎಚ್. ಶ್ರೀನಿವಾಸ ಮೂರ್ತಿ (ಸಾತನೂರು).**—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಕಪುರ ತಾಲ್ಲೂಕಿನಿಂದ ಪರದೇಶಕ್ಕೆ ಉತ್ತಮ ದರ್ಜೆಯ ಗ್ರಾನೈಟ್ ಕಲ್ಲು ರಫ್ತು ಆಗುತ್ತಿರುವುದು ಹಾಗೂ ಇದರಿಂದ ಸರ್ಕಾರಕ್ಕೆ ೪ ಲಕ್ಷಕ್ಕಿಂತ ಹೆಚ್ಚು ವರಮಾನ ಬರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಕಲ್ಲುಗಳನ್ನು ಕನಕಪುರ ತಾಲ್ಲೂಕಿನಲ್ಲಿಯೇ ಪಾಲಿಷ್ ಮಾಡುವ ಕಾರ್ಖಾನೆಯನ್ನು ಪ್ರಾರಂಭಿಸುವುದರಿಂದ ನೂರಾರು ನಿರುದ್ಯೋಗಿಗಳಿಗೆ ಕೆಲಸ ಸಿಗುವುದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

**ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).**—

ಅ) ಗಮನಕ್ಕೆ ಬಂದಿದೆ.

ಆ) ಗಮನಕ್ಕೆ ಬಂದಿದೆ. ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟ ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯು ಗ್ರಾನೈಟ್ ಕಲ್ಲುಗಳನ್ನು ಕಡಿದು ಪಾಲಿಷ್ ಮಾಡುವ ಘಟಕ ಒಂದನ್ನು ಹಾಸನದಲ್ಲಿ ಸ್ಥಾಪಿಸ ಲಾಗುತ್ತಿದೆ. ಆದುದರಿಂದ ಇದೊಂದೇ ತರಹದ ಕಲ್ಲನ್ನು ಉಪಯೋಗಿಸಿ ಪಾಲೀಷ್ ಮಾಡುವ ಕಾರ್ಖಾನೆಯನ್ನು ಕನಕಪುರ ತಾಲೂಕಿನಲ್ಲಿಯೇ ಸಧ್ಯಕ್ಕೆ ಪ್ರಾರಂಭಿಸುವುದು ಆರ್ಥಿಕ ದೃಷ್ಟಿಯಿಂದ ಸಾಧುವಲ್ಲ.

ಇ) "ಆ" ಕಾಲಂಗೆ ಉತ್ತರಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೊಸಪೇಟೆ ಟೌನಿನಲ್ಲಿ ಕಡಿಮೆ ಬೆಲೆಯ ಗೃಹಗಳ ನಿರ್ಮಾಣ

**೫೨೪. ಶ್ರೀ ಜಿ. ಶಂಕರಗೌಡ (ಹೊಸಪೇಟೆ).**— ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸಪೇಟೆ ನಗರ ವ್ಯಾಪ್ತಿಯಲ್ಲಿ ಕಡಿಮೆ ಖರ್ಚಿನಲ್ಲಿ ಮನೆಗಳನ್ನು ಕಟ್ಟಿಸಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಆ ಮನೆಗಳು ಇನ್ನೂ ಅಪೂರ್ಣಗೊಂಡಿರುವುದಲ್ಲದೆ ಮನೆಗಳ ನಿರ್ಮಾಣದಲ್ಲಿ ಬಹಳಷ್ಟು ಅನ್ಯಾಯ ನಡೆದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ಮತ್ತು ಸಿ. ಎಂ. ಸಿ. ಅಧಿಕಾರಿಗಳು ಆ ಮನೆಗಳಿಗೆ ಪೂರ್ತಿ ಹಣವನ್ನು ತೆಗೆದುಕೊಂಡು ದುರುಪಯೋಗ ನಡೆದಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ ಸರಕಾರದವರು ಅವರ ಮೇಲೆ ತೆಗೆದುಕೊಂಡ ಕ್ರಮವೇನು ?